## ಅಧ್ಯಾಯ ೧೦
# ಕಲೆ ಮತ್ತು ಸಂಸ್ಕೃತಿ

ತಾಲೂಕಿನ ಸಾಂಸ್ಕೃತಿಕ ಇತಿಹಾಸವು ಶಿಲಾಯುಗ ಮಾನವರಷ್ಟು ಪುರಾತನದ್ದಾಗಿದ್ದು, ಕಲೆ ಹಾಗೂ ಸಾಹಿತ್ಯ ಪರಂಪರೆಯೂ ಶ್ರೀಮಂತವಾಗಿದ್ದ ಅಂಶವನ್ನು ತಾಲೂಕಿನಲ್ಲಿ ಲಭಿಸಿರುವ ಶಾಸನ, ಸಾಹಿತ್ಯ ಹಾಗೂ ಕಲಾತ್ಮಕ ದೇವಾಲಯಗಳಿಂದ ವೇದ್ಯವಾಗುತ್ತದೆ. ತಾಲೂಕಿನ ಸೋಸಲೆ, ತಲಕಾಡು, ಬನ್ನೂರುಗಳು ಬಹು ಹಿಂದಿನಿಂದಲೂ ಸಾಹಿತಿಗಳಿಗೆ ಹೆಸರಾಗಿದ್ದು, ಆ ಪರಂಪರೆ ಈಗಲೂ ಮುಂದುವರಿದಿದೆ.

**ಶಾಸನಕವಿಗಳು :** ತಾಲೂಕಿನಲ್ಲಿ ಈವರೆಗೆ ಲಭಿಸಿರುವ ಮುನ್ನೂರಿಪ್ಪತ್ತಕ್ಕೂ ಹೆಚ್ಚು ಶಾಸನಗಳಲ್ಲಿ ನಾಲ್ಕಾರು ಕವಿಗಳ–ಲಿಪಿಕಾರರ ಹೆಸರಷ್ಟೆ ಲಭಿಸುತ್ತದೆ. ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ಸವಹಳ್ಳಿಯ ಶಾಸನವನ್ನು ಎರೆಯಂಗೇಶ್ವರ ದೇವರ ಸ್ಥಾನಿಕ ಲಕುಳೀಸ ಭಟಾರರು ರಚಿಸಿದ್ದಾರೆ. ಹೊಯ್ಸಳರ ಕಾಲದ ತುಂಬಲ (೧೧೮೦) ಶಾಸನವನ್ನು ಹೆಗ್ಗಡೆ ಬಮ್ಮದೇವನ ಅಳಿಯ ನಾಗದೇವನು ಬರೆದನೆಂದು ತಮಿಳಿನಲ್ಲಿ ದಾಖಲಿಸಲಾಗಿದೆ. ಇಮ್ಮಡಿ ನರಸಿಂಹನ ಕಾಲದ ತಲಕಾಡಿನ ಶಾಸನವೊಂದರಲ್ಲಿ ಸರಸ್ವತಿ ಕಂಠಾಭರಣ ಬಿರುದಾಂಕಿತ ಕವಿಯೋರ್ವನ ಕಾವ್ಯ ತುಣುಕು ಹರಿದಿದೆ. ಹಿರಿಯೂರಿನ ೧೩೮೯ರ ಶಾಸನದಲ್ಲಿ ಲಿಪಿಕಾರ ಸೇನಬೋವ ಮಲ್ಲಪ್ಪ ಹಾಗೂ ಕಂಬ ಕೊರೆದ ಓಜನ ಉಲ್ಲೇಖವಿದೆ. ಹೆಮ್ಮಿಗೆಯ ೧೩೬೭ರ ತಾಮ್ರಶಾಸನವನ್ನು ಶಾಸನಾಚಾರ್ಯ ನಾಗಿದೇವ ಶಿಲ್ಪಿಯು ನಿರ್ಮಿಸಿದ ಅಂಶ ಕಾವ್ಯಮಯವಾಗಿ ದಾಖಲಾಗಿದೆ. ಸೋಸಲೆಯ ವ್ಯಾಸರಾಜಮಠದಲ್ಲಿರುವ ತಾಮ್ರ ಶಾಸನಗಳಲ್ಲಿ ಕೃಷ್ಣದೇವರಾಯನ ಕಾಲಕ್ಕೆ ಸೇರಿದ ಎರಡು ಸಂಸ್ಕೃತ ಶಾಸನಗಳಲ್ಲಿ, ಶಾಸನ ಕವಿ ಸಭಾಪತಿಯ ಉಲ್ಲೇಖವಿದ್ದರೆ, ೧೬೩೪ರ ಇನ್ನೊಂದು ಶಾಸನದಲ್ಲಿ ಲಿಂಗರಾಯನ ಪ್ರಸ್ತಾಪವಿದೆ. ಸೋಸಲೆಯ ೧೬೬೨ರ ಇನ್ನೊಂದು ತಾಮ್ರಶಾಸನದಲ್ಲಿ ರಚನಕಾರ ರಾಯಸದ ವಾಬಣ್ಣನ ಉಲ್ಲೇಖವಿದೆ. ಕಾವ್ಯಶೈಲಿಯಲ್ಲಿರುವ ತಿರುಮಕೂಡಲು ನರಸೀಪುರದ ೧೬೬೩ರ ತಾಮ್ರ ಶಾಸನ, ಆಸ್ಥಾನವಿದ್ವಾಂಸ ಅಳಸಿಂಗಾರ್ಯನ ಮಗನಾದ ತಿರುಮಲಾರ್ಯನ ಮೊದಲ ಸಾಹಿತ್ಯ ತುಣುಕಾಗಿದೆ. ದಳವಾಯಿ ಅಗ್ರಹಾರ ತಾಮ್ರಶಾಸನ (೧೭೪೯)ದ ಕವಿ ಕೃಷ್ಣಾದೀಕ್ಷಿತನಾಗಿದ್ದು, ಇದು ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲೂ ಇರುವ ಅತ್ಯಂತ ಸುದೀರ್ಘ ಶಾಸನವಾಗಿದೆ.



**ಪ್ರಾಚೀನ ಕೃತಿಕಾರರು:** ತಲಕಾಡಿನ ಗಂಗರಸರಲ್ಲಿ ಅನೇಕರು ಸ್ವತಃ ಪಂಡಿತರಿದ್ದು, ಹಲವಾರು ಕೃತಿಗಳನ್ನು ರಚಿಸಿದ್ದಲ್ಲದೇ, ಕವಿಪುಂಗವರಿಗೆ ಆಶ್ರಯದಾತರೂ ಆಗಿದ್ದರು. ಇಮ್ಮಡಿ ಮಾಧವನು ದತ್ತಕಸೂತ್ರ ಎಂಬ ಸಂಸ್ಕೃತ ಗ್ರಂಥವನ್ನು ರಚಿಸಿದ್ದಾನೆ. ದುರ್ವಿನೀತನು ಪಾಣಿನಿಯ 'ಅಷ್ಟಾಧ್ಯಾಯಿ' ವ್ಯಾಕರಣ ಗ್ರಂಥಕ್ಕೆ 'ಶಬ್ದಾವತಾರ' ಎಂಬ ಟೀಕಾಗ್ರಂಥವನ್ನು ಭಾರವಿಯ ಕಿರಾತರ್ಜುನೇಯ ಗ್ರಂಥದ ೧೫ನೆಯ ಅಧ್ಯಾಯಕ್ಕೆ ಟೀಕೆಯನ್ನು ಹಾಗೂ ಗುಣಾಢ್ಯನ ವಡ್ಡ (ಬೃಹತ್)ಕಥಾ ಎಂಬ ಪೈಶಾಚಿ ಭಾಷೆಯ ಗ್ರಂಥವನ್ನು ಸಂಸ್ಕೃತಕ್ಕೆ ಭಾಷಾಂತರಿಸಿರುವ ಅಂಶ ಅನೇಕ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅಲ್ಲದೆ ಕವಿ ಭಾರವಿಯು ಇವನ ಆಸ್ಥಾನದಲ್ಲಿ ಸ್ವಲ್ಪಕಾಲ ಇದ್ದನೆಂದೂ ಹೇಳಲಾಗುತ್ತದೆ. ಇವನ ಆಸ್ಥಾನದಲ್ಲಿದ್ದ ಜೈನಯತಿ ಪೂಜ್ಯಪಾದನು ಜೀನೇಂದ್ರ ವ್ಯಾಕರಣ, ಸರ್ವಾರ್ಥ ಸಿದ್ಧಿ, ಜೈನಾಭಿಶೇಖರ ಸಮಾಧಿ ಶತಕ ಮುಂತಾದ ಧಾರ್ಮಿಕ ಗ್ರಂಥಗಳನ್ನು ರಚಿಸಿದ್ದಾನೆ. ಇವನ ದಾಯಾದಿಯಾಗಿದ್ದ ನಾಗಾರ್ಜುನನು 'ನಾಗಾರ್ಜುನ ಕಕ್ಷಪುಟ' ಎಂಬ ವೈದ್ಯಕೀಯ ಗ್ರಂಥವನ್ನು ರಚಿಸಿದ್ದಾನೆ. ಶ್ರೀಪುರುಷನು ಗಜಶಾಸ್ತ್ರ ಎಂಬ ಸಂಸ್ಕೃತಗ್ರಂಥದ ಕರ್ತೃವಾದರೆ, ಇಮ್ಮಡಿ ಶಿವಮಾರನು ಗಜಾಷ್ಟಕ ಎಂಬ ಕನ್ನಡ ಪದ್ಯಕೃತಿಯನ್ನು ರಚಿಸಿದ್ದಾನೆ. ಗಂಗಮಂತ್ರಿ ಚಾವುಂಡರಾಯನು 'ಚರಿತಾಸಾರ' ಎಂಬ ಸಂಸ್ಕೃತ ಗ್ರಂಥ, ಗೊಮ್ಮಟಸಾರಕ್ಕೆ ಟೀಕೆ, ಜೀನಾಕ್ಷರಮಾಲ ಎಂಬ ಪದ್ಯ ಕೃತಿ ಹಾಗೂ ಚಾವುಂಡರಾಯ ಪುರಾಣ (ತ್ರಿಷಷ್ಟಿ ಲಕ್ಷಣ ಮಹಾಪುರಾಣ) ಎಂಬ ಗದ್ಯ ಗ್ರಂಥಗಳನ್ನು ಕನ್ನಡದಲ್ಲೇ ರಚಿಸಿದ್ದಾನೆ. ಕೃಷ್ಣದೇವರಾಯನ ಸಮಕಾಲೀನರಾದ ವ್ಯಾಸರಾಜರು ಬನ್ನೂರಿನವರಾಗಿದ್ದು, ನ್ಯಾಯಾಮೃತ, ತಾತ್ಪರ್ಯಚಂದ್ರಿಕೆ, ತರ್ಕ ತಾಂಡವ, ಮಂದಾರ ಮಂಜರಿ ಮುಂತಾದ ಧಾರ್ಮಿಕ ಗ್ರಂಥಗಳ ಜೊತೆಗೆ ಅನೇಕ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ರಣಧೀರ ಕಂಠೀರವ ನರಸರಾಜ ಒಡೆಯರ ಆಸ್ಥಾನದಲ್ಲಿದ್ದ ಭಾರತೀ ನಂಜ ತಲಕಾಡಿನವನಾಗಿದ್ದು, 'ಕಂಠೀರವ ನರಸರಾಜ ಚರಿತ್ರೆ' ಎಂಬ ಗ್ರಂಥವನ್ನು ರಚಿಸಿದ್ದಾನೆ. ಹದಿನೇಳನೆಯ ಶತಮಾನದಲ್ಲಿದ್ದ ಸೋಸಲೆಯ ರೇವಣಾಚಾರ್ಯರು ಶರೀರ ಪ್ರಕಾಶಿಕೆ, ಅಂತಃಕರಣ ಪ್ರಕಾಶಿಕೆ, ಸ್ವಾಸ್ವರೂಪ ಪ್ರಕಾಶಿಕೆ ಮುಂತಾದ ಕೃತಿಗಳೊಂದಿಗೆ ಮಹಿಮ್ನಾಷ್ಟವ, ವೀರಶೈವ ಸಿದ್ಧಾಂತ ಶಿಖಾಮಣಿ (ಸಿದ್ಧಾರ್ಥ ಸಂಭೋಧಿನಿ), ಶಿವಾಧ್ಯಿಕ ಶಿಖಾಮಣಿ ಹಾಗೂ ಸದ್ಗುರು ರಗಳೆ ಎಂಬ ಟೀಕಾ ಗ್ರಂಥಗಳನ್ನೂ ರಚಿಸಿದ್ದಾರೆ. ಒಂದನೆಯ ಕೃಷ್ಣರಾಜ ಒಡೆಯರ ದಳವಾಯಿಯಾಗಿದ್ದ ವೀರರಾಜನು 'ಸಕಲ ವೈದ್ಯ ಸಂಹಿತಾ ಶರಾರ್ಣವ' ಎಂಬ ಕನ್ನಡ ಗ್ರಂಥವನ್ನು ರಚಿಸಿದ್ದಾನೆ.

**ಆಧುನಿಕ ಬರಹಗಾರರು :** ಅಂದಿನ ಸಂಸ್ಥಾನದ ಮೈಸೂರು ಗ್ಯಾಸೆಟಿಯರ್ ಉದ್ಗ್ರಂಥದ ಸಂಪಾದಕರಾಗಿದ್ದ ಸಿ. ಹಯವದನರಾಯರು ಗರ್ಗೇಶ್ವರಿಯವರು. ಆದಿ ಕರ್ನಾಟಕ ಜನಾಂಗಕ್ಕೆ ಸೇರಿದ್ದ ಸೋಸಲೆಯ ಎಸ್.ಸಿದ್ದಪ್ಪ ಮೂಲತಃ ಶಿಕ್ಷಕರಾಗಿದ್ದು, 'ಗೋವುಗಳ ಗೋಳಾಟ' ಎಂಬ ಕೃತಿಯನ್ನು ೧೯೩೭ರಲ್ಲಿ ಪ್ರಕಟಿಸಿದ್ದು ಇವರು ದಲಿತವರ್ಗದ ಮೊದಲ ಕವಿ ಎಂಬ ಅಭಿಪ್ರಾಯವಿದೆ. ಭಾಮಿನಿ ಷಟ್ಪದಿಯಲ್ಲಿ ರಚಿಸಲ್ಪಟ್ಟಿದ್ದ ಈ ಕೃತಿಗಾಗಿ ಆಳರಸರು ಬೀಟೆಮರದ ಪೆಟ್ಟಿಗೆಯನ್ನು ನೀಡಿ ಸನ್ಮಾನಿಸಿದ್ದ ಅಂಶ ಅದರ

ಮೇಲಿರುವ ಬರಹ ಖಚಿತಪಡಿಸುತ್ತದೆ. ಇವರು ಮಕ್ಕಳಿಗಾಗಿ ರಚಿಸಿದ್ದ ಹೊಸಗನ್ನಡ ಬಾಲಬೋಧೆ ಭಾಗ – ೧ (೧೯೩೩) ಹಾಗೂ ಭಾಗ – ೨ (೧೯೩೭) ಪುಸ್ತಕಗಳು ಪ್ರಕಟಗೊಂಡಿವೆ. ಅಲ್ಲದೇ ಇವರು ರಚಿಸಿರುವ ಶ್ರೀಚಾಂಗದೇವ ಚರಿತ್ರೆ (೧೯೧೭) ಇಂಗ್ಲೆಂಡ್ ಚರಿತ್ರೆ (೧೯೨೨), ಅತ್ಮಸಂಬೋಧ (೧೯೨೭), ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಚರಿತ್ರೆ (೧೯೭೪) ಹಸ್ತಪ್ರತಿಗಳು ಇರುವ ಅಂಶವನ್ನು ಡಿ.ಎಂ.ಮಂಜುನಾಥ ಸೋಸ್ಲೆ ಬೆಳಕಿಗೆ ತಂದಿದ್ದಾರೆ. ಸೋಸಲೆ ಎಸ್. ಸಿದ್ದಪ್ಪನವರು ಸ್ವತಃ ಸಂಗೀತಗಾರರಿದ್ದು, ಗಾಯನ, ತಂಬೂರಿ, ಪಿಟೀಲು ಹಾಗೂ ಚಿಟುಕದಾಳವನ್ನು ಸಮರ್ಥವಾಗಿ ನುಡಿಸುತ್ತಿದ್ದರೆಂದು ತಿಳಿದುಬರುತ್ತಿದ್ದು, ಆ ವಾದ್ಯಗಳನ್ನು ಇಂದಿಗೂ ಸೋಸಲೆಯಲ್ಲಿರುವ ಅವರ ಮನೆಯಲ್ಲಿ ನೋಡಬಹುದಾಗಿದೆ. ನಂತರದಲ್ಲಿ ಸೋಸಲೆಯ ಎಸ್.ಎಂ.ಮಾದಯ್ಯ ಈ ಪರಂಪರೆ ಮುಂದುವರಿಸಿದರು. 'ಸಾಹಿತ್ಯ ಭಾರತಿ' ಎಂದೇ ಖ್ಯಾತರಾಗಿದ್ದ ಪ್ರಸಿದ್ದ ಸಾಹಿತಿ ಎನ್.ಅನಂತರಂಗಾಚಾರ್ ಹಾಗೂ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಎನ್. ಪ್ರಭುಸ್ವಾಮಿ ನರಸೀಪುರದವರು. 'ಭಾರತಕ್ಕೆ ಅಮೆರಿಕಾದ ಆರ್ಥಿಕ ನೆರವು' ಮುಂತಾದ ಕಿರು ಕೃತಿಗಳನ್ನು ರಚಿಸಿದ್ದ ಎನ್. ಪ್ರಭುಸ್ವಾಮಿ ಉನ್ನತ ಅಧ್ಯಯನಕ್ಕೆ ೧೯೭೦ರ ದಶಕದಲ್ಲಿ ಅಮೇರಿಕಾಕ್ಕೆ ಭೇಟಿ ನೀಡಿದ್ದರು. ಇದೇ ರೀತಿ ಹೆಸರಾಂತ ಪತ್ರಿಕೋದ್ಯಮಿ ಎನ್.ಎಸ್. ಸೀತಾರಾಮಶಾಸ್ತ್ರಿ ಕೂಡ ನರಸೀಪುರದವರೇ. ಭಜಗೋವಿಂದಂ, ಬೇರುಗಳು, ಪಾತಮ್ಮನ ಹಾಡು ಮುಂತಾದ ಕೃತಿಗಳನ್ನು ಮಲೆಯಾಳದಿಂದ ಕನ್ನಡಕ್ಕೆ ಭಾಷಾಂತರಿಸಿರುವ ಬಿ.ಕೆ.ತಿಮ್ಮಪ್ಪ ಬನ್ನೂರಿನವರಾಗಿದ್ದು, ಮಲೆಯಾಳಿ ಕವಿಗಳಾದ ಕುಮಾರನ್, ಆಶಾನ್ ಹಾಗೂ ಕೂಜನ್ ನಂಬಿಯಾರ್ ಬಗ್ಗೆ ವಿಮರ್ಶಾ ಗ್ರಂಥಗಳನ್ನೂ ರಚಿಸಿದ್ದಾರೆ. ಬನ್ನೂರಿನವರೇ ಆದ ಎಚ್.ಎನ್. ನಂಜಯ್ಯ (ಹೊನ್ನಬನ ಕಾವ್ಯಾಂಕಿತ) ಧರ್ಮದೇವತೆಯ ಕೊರಗು ಮತ್ತಿತರ ಪದ್ಯಗಳು, ವಿಶ್ವವೇದಾಂತಿ, ಚೋರಗ್ರಾಹಕ, ಕನ್ನಡದ ಬೋಧನಾ ಕ್ರಮ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಸೋಸಲೆಯ ಚ. ಸುಂದರೇಶನ್‌ರವರು 'ಬಸವಣ್ಣನವರ ವಚನಗಳು', 'ಶ್ರೀಸಿದ್ದಲಿಂಗೇಶ್ವರ ಸ್ತೋತ್ರ ಸಾಹಿತ್ಯ', 'ಭಾವಚಿಂತಾರತ್ನ', 'ಗೋಲ್ಗೋಥ ವೈಶಾಖಿ', 'ಮರುಗಮಲ್ಲಿಗೆ' ಮುಂತಾದ ಗ್ರಂಥಗಳನ್ನು ರಚಿಸಿದ್ದರು. ಕನ್ನಡ ವಿದ್ವಾಂಸರಾಗಿದ್ದ ಚ.ಮಹಾದೇವಪ್ಪನವರೂ ಸೋಸಲೆಯವರೆ. ತಲಕಾಡಿನ ಎಚ್.ಕೆ. ರಾಮನಾಥ್, ನಾಟಕದಲ್ಲಿ ಆಸಕ್ತರಿದ್ದು, ಬಸವೇಶ್ವರರು ಎಂಬ ಕೃತಿಯನ್ನು ರಚಿಸಿದವರು. ತಲಕಾಡಿನ ಹಸ್ತಿಕೇರಿ ಮಠದ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದವರು. ಸೋಸಲೆಯ ವ್ಯಾಸರಾಜ ಮಠದ ವಿದ್ಯಾಪ್ರಸನ್ನ ತೀರ್ಥರು ಹಲವಾರು ಹರಿಕೀರ್ತನೆಗಳನ್ನು ರಚಿಸಿದ್ದಾರೆ. ಮೂಲತಃ ಗುಂಡ್ಲುಪೇಟೆಯವರಾಗಿದ್ದು ಈಗ ತಲಕಾಡಿನಲ್ಲಿ ನೆಲೆಸಿರುವ ಆರ್.ವೆಂಕಟೇಶ್ ರವರು 'ಬೇಂದ್ರೆಕೃತಿ ಮತ್ತು ವ್ಯಕ್ತಿ', ವಿಚಾರ ತರಂಗ, ಮುಂತಾದ ಗ್ರಂಥಗಳಿಂದ ಖ್ಯಾತರಾದರೆ ತಲಕಾಡಿನ ಜಿ.ನಾಗರಾಜು, 'ತಲಕಾಡು ತಾವರೆ' ಹಾಗೂ 'ಮುಡುಕುತೊರೆ' ಕೃತಿಗಳನ್ನು ಟಿ.ಜಿ. ರಾಮೇಗೌಡ ಹಾಗೂ ಟಿ.ರಂಗೇಗೌಡರ ಸಹಯೋಗದೊಂದಿಗೆ ರಚಿಸಿದ್ದಾರೆ. ಡಾ. ಎಂ.ಪಿ. ನರಸಪ್ಪ ಹಾಗೂ ಇತರರು ಕನ್ನಡಕ್ಕೆ ಅನುವಾದಿಸಿರುವ 'ಗರುಡಪುರಾಣ'ವನ್ನು ತಲಕಾಡಿನ



ಟಿ.ಇ. ಅಪ್ಪಾಜಿಗೌಡ ಪ್ರಕಟಿಸಿದ್ದಾರೆ. ಸಿದ್ದನಹುಂಡಿಯ ಎಚ್. ಗೋವಿಂದಯ್ಯ ಕವಿಯಾಗಿಯೂ, ಕುಪ್ಪದ ಕೆಂಪಾಚಾರ್ ಸಣ್ಣಕತೆ ರಚನೆಗೂ ಹೆಸರಾಗಿದ್ದವರು. ಬನ್ನೂರಿನ ಪಂಡಿತ ಎಚ್.ಎನ್. ನಂಜಯ್ಯ ಖ್ಯಾತ ಬರಹಗಾರರಾಗಿದ್ದು, ಪ್ರಾಣಿಶಾಸ್ತ್ರಜ್ಞ ನಂ. ಬೋಳೇಗೌಡ, ಕನ್ನಡ ಪ್ರಾಧ್ಯಾಪಕ ಬಿ.ಕೆ. ತಿಮ್ಮಪ್ಪ ಕೂಡ ಬನ್ನೂರಿನವರೇ. ಎನ್.ಜಿ.ಎ.ಎಫ್‌ನಲ್ಲಿ ನಿರ್ದೇಶಕರಾಗಿದ್ದ ತಲಕಾಡು ಮೂಲದ ಟಿ. ಕೃಷ್ಣೇಗೌಡರು ಇತಿಹಾಸ ಕ್ಷೇತ್ರದಲ್ಲಿ ಅಧ್ಯಯನಶೀಲರಾಗಿದ್ದವರು. ಎಸ್.ಮೇಗಡಹಳ್ಳಿಯ ಎಂ.ಪಿ. ಮಹಾದೇವಯ್ಯ ಇತಿಹಾಸ ಕ್ಷೇತ್ರದಲ್ಲಿ ಸಂಶೋಧಕರಾಗಿ ಅನೇಕ ಲೇಖನಗಳನ್ನು ರಚಿಸಿದ್ದಾರೆ. ಸೋಸಲೆಯ ಎನ್. ಚಿನ್ನಸ್ವಾಮಿ ಇತಿಹಾಸ ಸಂಶೋಧನೆಯಲ್ಲಿ ತೊಡಗಿದ್ದು, ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಲಕಾಡಿನ ಭ್ರಮಾರಂಬ ರವಿಶಂಕರ್ ಅವರು ಬ್ಯಾಡಿಗೆರೆ ಮಲ್ಲಯ್ಯನವರೊಡಗೂಡಿ ಸಿ. ಅಂಕಪ್ಪನವರ 'ಆದರ್ಶ್ ವಿವಾಹ್' ಎಂಬ ಹಿಂದಿ ನಾಟಕವನ್ನು ಕನ್ನಡಿಸಿದ್ದಾರೆ. ನರಸೀಪುರದ ಎಂ.ಲೀಲಾರಾಮಣ್ಣ, 'ಮಾಯಾ', 'ತ್ರಿಪುರ ಸುಂದರಿ' ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ಪ್ರಸಿದ್ಧ ಸಸ್ಯವಿಜ್ಞಾನಿ ಡಾ. ಟಿ.ಸಿ. ಶಿವಶಂಕರಮೂರ್ತಿ ತಲಕಾಡಿನವರು, ಪ್ರಸಿದ್ಧ ಕವಿಯತ್ರಿ ಕಮಲಹೆಮ್ಮಿಗೆ, ವೀಣಾವಾದಕಿ ಹಾಗೂ ಕಾದಂಬರಿಗಾರ್ತಿ ಇಂದಿರಾ ರಾಜಶೇಖರ್ (ಇಂದಿರಾಣಿ)ರ ಜನ್ಮಸಳ ನರಸೀಪುರ. ತತ್ವಶಾಸ್ತ್ರಜ್ಞ ಬಸವರಾಜು (ವಿಶ್ವಧರ್ಮಕ್ಕೆ ಶ್ರೀರಾಮಾನುಜರ ಕೊಡುಗೆ) ರವರು ತಲಕಾಡಿನವರು. ತಲಕಾಡಿನ ಟಿ.ವಿ. ಸತ್ಯನಾರಾಯಣ ಆರ್. ವೆಂಕಟೇಶ್ ಮತ್ತು ಕನ್ನೂರಿನ ಕೆ. ರಾಜು, ಸೋಸಲೆಯ ನಾಗೇಶ್, ಮಂಜುನಾಥ ಗಂಗಾಧರ ಮುಂತಾದವರು ಇತ್ತೀಚಿನ ಪ್ರಮುಖ ಬರಹಗಾರರಾಗಿದ್ದಾರೆ. ಅದರಲ್ಲೂ ಸೋಸಲೆಯ ಮಂಜುನಾಥರವರು 'ಆದಿಕರ್ನಾಟಕ ಆದಿಕವಿ ಸೋಸ್ಲೆ ಎಸ್.ಸಿದ್ಧಪ್ಪ' ಎಂಬ ಗ್ರಂಥವನ್ನು ಪ್ರಕಟಿಸಿ ಖ್ಯಾತರಾಗಿದ್ದಾರೆ. ತಲಕಾಡು ಎಂ. ನಾಗರಾಜಮೂರ್ತಿ ಮತ್ತೊಬ್ಬ ಉದಯೋನ್ಮುಖ ಬರಹಗಾರರಿದ್ದು, ಒಂದೆರಡು ಕೃತಿಗಳನ್ನೂ ರಚಿಸಿದ್ದಾರೆ.

ಆದಿಕರ್ನಾಟಕ ಜನಾಂಗದ ಸೋಮನಾಥಪುರ ಕಾಮ್ರೆಡ್ ರಂಗನಾಥಯ್ಯನವರು, ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿ ರಾಜಕೀಯ ರಂಗದಲ್ಲಿ ಸೇವೆ ಸಲ್ಲಿಸಿದವರು. ಸೋಸಲೆಯ ಬಿ.ರಾಚಯ್ಯ ಆದಿಕರ್ನಾಟಕ ಜನಾಂಗದ ಮೊದಲ ಪದವಿಧರರಾಗಿದ್ದು, ಕಮೀಷನ್ನರಾಗಿ ಸೇವೆ ಸಲ್ಲಿಸಿದವರು. ಸೋಮನಾಥಪುರದ ಆರ್. ಭೈರಣಯ್ಯ, ಆರ್. ಶಂಕರಪ್ಪ, ಪದ್ಮನಾಭ್ ಐ.ಎ.ಎಸ್. ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಈ ಪಟ್ಟಿಗೆ ಸೋಮನಾಥಪುರದ ಸುಭಾಷ್‌ಭರಣಿ ಸೇರುತ್ತಾರೆ. ಇವರ ಸಂಶೋಧನಾ ಕೃತಿ 'ಧರೆಗೆ ದೊಡ್ಡವರು' ಉಲ್ಲೇಖಾರ್ಹವಾಗಿದೆ. ದೊಡ್ಡಬಾಗಿಲಿನ ಸಿದ್ದಣ ಐಪಿಎಸ್. ಅಧಿಕಾರಿಯಾಗಿದ್ದವರು. ಸೋಸಲೆ ಸೋಮಶೇಖರ್, ನರಸೀಪುರದ ಕುಮಾರಸ್ವಾಮಿ ಐ.ಎಫ್.ಎಸ್. ಸೇವೆಯಲ್ಲಿದ್ದಾರೆ. ಅಮೆರಿಕಾದಲ್ಲಿ ಸ್ವಂತ ನರ್ಸಿಂಗ್‌ಹೋಮ್ ನಡೆಸುತ್ತಿರುವ ಪ್ರಸಿದ್ಧ ವೈದ್ಯ ಡಾ. ಬೀರಕುಚೇಲ ಸೋಸಲೆಯವರು.

ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ (೧೯೮೯) ಘಟಕ ಕ್ರಿಯಾಶೀಲವಾಗಿದ್ದು, ಷಣ್ಮುಖಸ್ವಾಮಿಯವರಂತಹ ಸಮರ್ಥ ಅಧ್ಯಕ್ಷರ ಮುಂದಾಳತ್ವದಲ್ಲಿ ಪಿ. ನಾಗಸುಂದರಪ್ಪ

ಮುಂತಾದ ಸಕ್ರಿಯ ಸದಸ್ಯರ ಮಾರ್ಗದರ್ಶನದಲ್ಲಿ ಮೊದಲ ತಾಲೂಕು ಸಾಹಿತ್ಯ ಸಮ್ಮೇಳನವನ್ನು ೧೯೯೦ರಲ್ಲಿ ನಡೆಸುವ ಮೂಲಕ ತಾಲೂಕು ಸಮ್ಮೇಳನವನ್ನು ರಾಜ್ಯದಲ್ಲಿ ಮೊದಲ ಬಾರಿಗೆ ಆರಂಭಿಸಿದ ಹೆಗ್ಗಳಿಕೆಯನ್ನು ತನ್ನದಾಗಿಸಿಕೊಂಡಿತು. ಷಣ್ಮುಖಸ್ವಾಮಿಯವರ ಅಧ್ಯಕ್ಷಾವಧಿಯಲ್ಲಿ ಆರು ತಾಲೂಕು ಸಮ್ಮೇಳನಗಳನ್ನು ನಡೆಸುವ ಮೂಲಕ ಹಲವಾರು ಯುವಪ್ರತಿಭೆಗಳನ್ನು ಬೆಳಕಿಗೆ ತರುವಲ್ಲಿ ತಾಲೂಕು ಸಾಹಿತ್ಯ ಪರಿಷತ್ ಯಶಸ್ವಿಯಾಗಿದೆ. ಇವರ ಅಧ್ಯಕ್ಷಾವಧಿಯಲ್ಲಿ (೧೯೮೯–೨೦೦೯) ಎಚ್. ವೆಂಕಟೇಶ್, ಗುರುಸ್ವಾಮಿ ಈಡಿಗರ್, ನಾಗೇಂದ್ರಕುಮಾರ್, ರಾಜೀವಲೋಚನಾ, ಎಂ. ಲಕ್ಷ್ಮಯ್ಯ ಮತ್ತು ಮಹಂತಪ್ಪ ನಾಗೂರು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಎಂ. ಲಕ್ಷ್ಮಯ್ಯ, ಪರಿಷತ್ತಿನ ಅಧ್ಯಕ್ಷರಾಗಿದ್ದು, ಕೆ. ಮಹಾದೇವಯ್ಯ ಹಾಗೂ ಕಲ್ಕುಂದ ರತ್ನಾಶೇಖರ್ ಕಾರ್ಯದರ್ಶಿಗಳಾಗಿದ್ದಾರೆ. ಕನ್ನಡ ಚಳುವಳಿಗಾರರೆಂದೇ ಗುರುತಿಸಿಕೊಂಡಿರುವ ವಾಟಾಳು ನಾಗರಾಜ್ ಅವರು ವಾಟಾಳಿನವರಾಗಿದ್ದು, ಪ್ರಸ್ತುತ ವಿಧಾನಸಭಾ ಸದಸ್ಯರಾಗಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡಿದ್ದಾರೆ.

**ಶಿಲ್ಪಿಗಳು :** ತಾಲೂಕಿನ ಇತಿಹಾಸ ಪ್ರಸಿದ್ಧ ಕೇಂದ್ರಗಳಾದ ತಲಕಾಡು, ತಡಿಮಾಲಂಗಿ, ಸೋಮನಾಥಪುರ, ಮೂಗೂರು, ಬನ್ನೂರು, ತಿರುಮಕೂಡಲು, ನರಸೀಪುರ ಮುಂತಾದೆಡೆಗಳಲ್ಲಿರುವ ಕಲಾತ್ಮಕ ದೇವಾಲಯಗಳು ಹಿಂದಿನ ವಾಸ್ತು–ಶಿಲ್ಪ ನಿರ್ಮಾಣ ಚಟುವಟಿಕೆಯ ಮೈಲಿಗಲ್ಲುಗಳಾಗಿದ್ದು, ಸೋಮನಾಥಪುರದ ಶಾಸನಗಳಲ್ಲಿ ಮಲಿತಮ್ಮ ಬಲ್ಲೆಯ, ಕೇತೇಯ, ಮಸಣಿತಮ್ಮ ಮುಂತಾದ ಹತ್ತಾರು ಶಿಲ್ಪಿಗಳ ಹೆಸರುಗಳಿವೆ. ಗಂಗ, ಚೋಳ, ಹೊಯ್ಸಳ, ವಿಜಯನಗರ ಕಾಲದಲ್ಲಿ ಬೇರೆಡೆಯಿಂದ ಇಲ್ಲಿಗೆ ಬಂದ ಶಿಲ್ಪಿಗಳಲ್ಲಿ ಕೆಲವರಾದರೂ ಇಲ್ಲಿ ನೆಲೆಸಿರುವ ಸಾಧ್ಯತೆಗಳಿದ್ದು, ತಾಲೂಕಿನಲ್ಲಿ ಅಲ್ಲಲ್ಲಿ ಶಿಲ್ಪಿಗಳು ವಿರಳವಾಗಿ ಕಂಡುಬರುತ್ತಾರೆ. ಇವರಲ್ಲದೆ ಬಡಗಿ, ಕಮ್ಮಾರ, ಕುಂಬಾರ, ಹಾಗೂ ಅಕ್ಕಸಾಲಿಗಳೂ ತಾಲೂಕಿನಲ್ಲಿ ವಿರಳವಾಗಿ ನೆಲೆಸಿದ್ದಾರೆ.

**ಪತ್ರಿಕೋದ್ಯಮ :** ಜಿಲ್ಲೆಯ ಪತ್ರಿಕೋದ್ಯಮ ಇತಿಹಾಸವನ್ನು ದ್ವಿಭಾಷಾ ವಾರಪತ್ರಿಕೆಯಾದ ರೆಕಾರ್ಡರ್ (೧೮೫೯)ನೊಂದಿಗೆ ಗುರುತಿಸಬಹುದಾಗಿದ್ದು, ಯಜಮಾನ ವೀರಸಂಗಪ್ಪನವರ ಮೈಸೂರು ಸ್ಟಾರ್ (೧೮೮೦); ಹಿತಬೋಧಿನಿ (೧೮೮೩), ವೃತ್ತಾಂತ ಪತ್ರಿಕೆ (೧೮೮೭), ವೃತ್ತಾಂತ ಚಿಂತಾಮಣಿ (೧೮೮೭) ನಂಜನಗೂಡು ಎನ್.ತಿರುಮಲ್ಲಮ್ಮನವರ ಕರ್ನಾಟಕ ನಂದಿನಿ(೧೯೧೬), ಸತ್ಯವಾದಿ (೧೯೧೭) ಮೈಸೂರು ವೃತ್ತಾಂತ (೧೯೨೦) ಸನ್ಮಾರ್ಗದರ್ಶಿನಿ (೧೯೨೨, ನಂಜನಗೂಡು), ಸಾಧ್ವಿ (೧೮೯೯) ತಾಯಿನಾಡು (೧೯೨೭) ಮೈಸೂರು ಪತ್ರಿಕೆ (೧೯೪೧) ಮುಂತಾದ ಪತ್ರಿಕೆಗಳು ತಾಲೂಕಿನ ಮೇಲೆ ಆರಂಭದಲ್ಲಿ ಪ್ರಭಾವ ಬೀರಿದವು. ತಾಲೂಕಿನ ಮೊದಲ ಪತ್ರಿಕೆಯಾದ 'ಸಂಪೂರ್ಣ' ೧೯೭೨ರಲ್ಲಿ ಬೆಳಕು ಕಂಡಿತು. ತಲಕಾಡಿನಿಂದ ಸ್ವಲ್ಪಕಾಲ ಪ್ರಕಟವಾದ ಇದಕ್ಕೆ ಹಸ್ತಿಕೇರಿಮಠದ ಸಿದ್ಧಲಿಂಗ ಮಲ್ಲಿಕಾರ್ಜುನ ಸ್ವಾಮಿ ಸಂಪಾದಕರಾಗಿದ್ದರು. ಪ್ರಸ್ತುತ ಸೋಸಲೆ ಸಿದ್ಧರಾಜುರವರು 'ರೊಚ್ಚಿಗೆದ್ದ ಕನ್ನಡಿಗ' ಎಂಬ ವಾರಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುತ್ತಿದ್ದಾರೆ.



**ಜಾನಪದ :** ತಾಲೂಕಿನ ಜಾನಪದಗೀತೆ ಹಾಗೂ ಕಾವ್ಯಗಳು ವಿಶೇಷವಾಗಿ ಮುಡುಕುತೊರೆ ಮಲ್ಲಿಕಾರ್ಜುನ, ಮಲೇಮಹದೇಶ್ವರ, ಚಾಮುಂಡೇಶ್ವರಿ, ನಂಜುಂಡೇಶ್ವರ, ಬಿಳಿಗಿರಿ ರಂಗನಾಥ, ಕೊಂಗಳ್ಳಿ ಮಲ್ಲಯ್ಯ, ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ಧಪ್ಪಾಜಿ ಹಾಗೂ ಕೆಂಡಗಂಡಸ್ವಾಮಿಯರ ಸುತ್ತ ಪ್ರಧಾನವಾಗಿ ಹೆಣೆದಿರುವ ಕಥನಕಾವ್ಯಗಳಾಗಿದ್ದು, ಗಮನ ಸೆಳೆಯುತ್ತವೆ. ದೇವರ ಗುಡ್ಡರು, ನೀಲಗಾರರು ಹಾಗೂ ಗೊರವರು ತಾಲೂಕಿನಲ್ಲಿ ಸಾಕಷ್ಟು ಸಂಖೆಯಲ್ಲಿದ್ದಾರೆ. ತಾಲೂಕಿನಲ್ಲಿ ಬೀಸಕಂಸಾಳೆ ಕಲಾವಿದರೂ ಇದ್ದು, ಮಾರಿಕುಣಿತಕ್ಕೂ ಈ ತಾಲೂಕು ಹೆಸರಾಗಿದೆ. ಡೊಳ್ಳುಕುಣಿತ, ಗೊರವರ(ಕಡಬಡ್ಡಯ್ಯ) ಕುಣಿತ, ನಂದೀಧ್ವಜ ಕುಣಿತ, ವೀರಮಕ್ಕಳ ಕುಣಿತ, ಸುಗ್ಗಿಕುಣಿತ, ಪಾಳೇಗಾರ ವೇಷ, ಹುಲಿವೇಷದ ಕುಣಿತ, ಕೋಲಾಟ, ಮುಂತಾದವೂ ತಾಲೂಕಿನಲ್ಲಿವೆ. ಜಾನಪದ ಗಾಯನಕ್ಕೆ ಜನ್ನೂರು ಹೋಬಳಿಯ ಬೀಡನಹಳ್ಳಿ, ಖ್ಯಾತವಾಗಿದ್ದು, ಮೆಣಸಿಕ್ಯಾತನಹಳ್ಳಿಯ ಸೋಬಾನೆ ಗಾಯನ ತಂಡ ಖ್ಯಾತಿಪಡೆದಿದೆ. ಸೋಬಾನೆಪದ, ಭಜನೆ, ನಾಟಿಪದ, ಲಾವಣಿ, ಕೋಲುಪದ, ಕೊಂತಿಪದ, ಮುಂತಾದ ಜನಪದ ಗಾಯನ ಪರಂಪರೆ ಅಲ್ಲಲ್ಲಿ ಉಳಿದುಬಂದಿದೆ. ಸೋಸಲೆಯ ಎಸ್.ಎಂ.ಮಾದಯ್ಯ ಪ್ರಸಿದ್ಧ ಲಾವಣಿಗಾಯಕರಿದ್ದು, ಗಾಂಧೀಜಿಯವರಿಂದಲೂ ಮೆಚ್ಚುಗೆ ಪಡೆದಿದ್ದವರು. ಕೊಡಗಳ್ಳಿ ಗ್ರಾಮವು ರಾಕ್ಷಸ ಕುಣಿತ, ಹನುಮನ ಕುಣಿತ, ನಂದಿಕೋಲು ಕುಣಿತ, ಕಳಸ ಕರಗದ ಕುಣಿತಗಳಿಗೆ ಹೆಸರಾಗಿತ್ತು. ಗಾಡಿಜೋಗಿಹುಂಡಿಯ ಮಾದೇಗೌಡರ ತಂಡ ಹಾಗೂ ಕೂರಹಳ್ಳಿ ಕೊಪ್ಪಲಿನ ಜವರಪ್ಪನವರ ತಂಡಗಳು ವೀರಮಕ್ಕಳ ಕುಣಿತಕ್ಕೆ ಹೆಸರಾಗಿದ್ದವು. ಹೇಮಾದ್ರಮ್ಮನ ಜಾತ್ರೆಯಲ್ಲಿ ಕಾಣಸಿಗುವ ಹೆಬ್ಬಾರೆ ಕುಣಿತ, ಕೊಳತೂರು ಮಾದಪ್ಪ ಹಾಗೂ ಚಿಕ್ಕಬಾಗಿಲಿನ ಮಾದೇಗೌಡರ ಕಂಸಾಳೆ ತಂಡಗಳು; ಮಾದಿಗಹಳ್ಳಿಯ ತಂಬೂರಿ ಜವರಯ್ಯನವರ ನೀಲಗಾರ ಮೇಳ, ಕರೋಹಟ್ಟಿಯ ಮಲ್ಲಯ್ಯನವರ ಗೊರವರ ತಂಡ; ಕಾಡುಕೊತ್ತಹಳ್ಳಿ, ಸೀಹಳ್ಳಿ, ಅರವಟ್ಟಿಗೆ ಕೊಪ್ಪಲುಗಳಲ್ಲಿದ್ದ ಕೋಲಾಟ ತಂಡಗಳು, ಪ್ರಸಿದ್ಧವಾಗಿದ್ದು, ತೊಗಲುಗೊಂಬೆಯಾಟ ತಾಲೂಕಿನಲ್ಲಿ ವಿರಳವಾಗುತ್ತಿದ್ದು, ಹಬ್ಬ, ಜಾತ್ರೆ, ಸಂದರ್ಭಗಳಲ್ಲಿ ಹುಲಿವೇಷ, ಪಾಳೇಗಾರವೇಷ ಹಾಕುವ ಸಂಪ್ರದಾಯ ಕ್ವಚಿತ್ತಾಗಿ ಉಳಿದಿದೆ. ತಲಕಾಡಿನ ಡೋಕಿಮಾದಮ್ಮ ಜಾನಪದ ಗಾಯಕಿಯಾಗಿ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪುರಸ್ಕರಿಸಲ್ಪಟ್ಟಿದ್ದವರು. ತಲಕಾಡಿನ ಶ್ರೀರಾಮ ಯಕ್ಷಗಾನ ಮಂಡಳಿ ಸೇರಿದಂತೆ ತಾಲೂಕಿನ ಹೆಮ್ಮಿಗೆ, ಕುರುಬೂರು, ಕಲಿಯೂರು ಅಯ್ಯನವರ ಹುಂಡಿ ಮುಂತಾದೆಡೆ ಯಕ್ಷಗಾನ ತಂಡಗಳಿದ್ದು, ಯಕ್ಷಗಾನವನ್ನು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿವೆ. ತಲಕಾಡಿನ ನಾರಾಯಣಗೌಡರು ಪ್ರಸಿದ್ಧ ಯಕ್ಷಗಾನ ಕಲಾವಿದರಾಗಿದ್ದು, ರಾಜ್ಯ ಯಕ್ಷಗಾನ ಅಕಾದೆಮಿಯಿಂದ ಸನ್ಮಾನಿಸಲ್ಪಟ್ಟಿದ್ದವರು. ತಲಕಾಡಿನ ಮಾಯಿಗೌಡರು ಪ್ರಸಿದ್ಧ ಗಮಕಿಗಳೂ, ಯಕ್ಷಗಾನ ಕಲಾವಿದರೂ ಆಗಿದ್ದು, ೧೯೭೫ರಲ್ಲಿ ಸಾಹಿತ್ಯ ಅಕಾದೆಮಿಯಿಂದ ಗೌರಿವಿಸಲ್ಪಟ್ಟವರು ಹೆಸರಾಂತ ಕೀರ್ತನಾಕಾರ ಹಾಗೂ ಮೃದಂಗ ವಾದಕರಾದ ರಾಮದಾಸರು ಸೋಸಲೆಯವರಾಗಿದ್ದು, ಬನ್ನೂರಿನ ಕೆಂಪಮ್ಮನವರ ತಂಡ ಸೋಬಾನೆ ಪದಗಳಿಗೆ ಪ್ರಸಿದ್ಧವಾಗಿತ್ತು.

**ರಂಗಭೂಮಿ :** ಆಸ್ಥಾನ ವಿದ್ವಾನ್ ಗರಳಪುರಿ ಶಾಸ್ತ್ರಿಗಳ ಮಗನಾದ ಸೋಸಲೆಯ ಅಯ್ಯಪ್ಪಶಾಸ್ತ್ರಿ ಪ್ರಸಿದ್ಧ ನಾಟಕಕಾರರಾಗಿದ್ದು, ಆಸ್ಥಾನ ಕವಿಗಳೆಂದೂ 'ಕವಿತಿಲಕ' ರೆಂದೂ ಖ್ಯಾತರಾಗಿದ್ದು, ಇವರ ಜನ್ಮಸ್ಥಳ ಸೋಸಲೆ. ಇವರು ರಚಿಸಿದ್ದ ವಿಕ್ರಮೋರ್ವಶಿಯ (೧೮೮೨), ಪ್ರತಾಪಸಿಂಹಚರಿತೆ (೧೮೮೯) ಹಾಗೂ ರಾಮಾಯಣ ಸಂಗ್ರಹ (೧೮೮೬) ನಾಟಕಗಳನ್ನೂ ಅರಮನೆಯ ನಾಟಕ ಕಂಪೆನಿಯಾದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯು ೧೮೮೧–೧೯೦೭ರ ಅವಧಿಯಲ್ಲಿ ಪ್ರದರ್ಶಿಸಿತ್ತು. ತಮಿಳು ಹಾಗೂ ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿರುವ ಪ್ರಭು ಕುಟುಂಬದವರೂ ಮೂಲತಃ ಮೂಗೂರಿನವರು. ನಾಟಕ ಕಲಾವಿದ ಎಚ್.ಕೆ. ರಾಮನಾಥ್ ತಲಕಾಡಿನವರು. ಕೀರ್ತನಕಾರ ಜಾನಪದ ಸಂಗ್ರಾಹಕ, ಬಿಸಿ. ಚೌಡೇಗೌಡ, ಬೀಡನಹಳ್ಳಿಯವರು ತಲಕಾಡಿನ ಜಿ.ಎಲ್.ವೈದ್ಯನಾಥನ್, ಹನುಮನಾಳು ಸಿದ್ದೇಗೌಡ ಹಾಗೂ ನರಸೀಪುರದಲ್ಲಿ ನೆಲೆಸಿದ್ದ ಎಸ್. ಶ್ರೀನಿವಾಸಯ್ಯ ಪ್ರಸಿದ್ಧ ಗಮಕಿಗಳಾಗಿದ್ದರು. ಪೌರಾಣಿಕ ನಾಟಕಗಳನ್ನು ನಿರ್ದೇಶಿಸುತ್ತಿದ್ದ ಸಿದ್ಧಯ್ಯನವರು ಸೋಸಲೆಯವರು. ನಾಟಕಕಾರರಾಗಿ, ಸುಮಾರು ೬೦ ವರ್ಷ ಕ್ರಿಯಾಶೀಲರಾಗಿದ್ದ ಎಂ.ಪಿ. ರಾಚಸೆಟ್ಟಿ, ಕಿರೇಸೂರಿನ ರಾಚಯ್ಯ, ಹುಳುಕ ಹುಂಡಿಯ ಚಿಕ್ಕಣ, ಹಿಂದಿನ ಖ್ಯಾತನಾಮರು. 'ನಾಟಕದ ಮೇಸ್ತ್ರು' ವಿ.ರಾಮಯ್ಯ ಹಾಗೂ ಕ್ಲಾರಿಯೋನೇಟ್ ಮಲ್ಲಣ್ಣ ಸೋಸಲೆಯವರು. ತಮಟೆ ಸಿದ್ಧಯ್ಯ, ಮೋರಿ ಕರಿಯಯ್ಯ ಹಾಗೂ ಡೋಲು ಬಸವಯ್ಯ ಕೆಬ್ಬೇಪುರದವರು. ನರಸೀಪುರದ ಕಾಮಯ್ಯ ಚಿಲಕವಾಡಿ ಪ್ರಸಿದ್ಧ ನಾದಸ್ವರ ವಿದ್ವಾನರಾಗಿದ್ದವರು.

**ಸಂಗೀತ–ನೃತ್ಯ :** ಮೂಗೂರು ಸುಬ್ಬಣ್ಣ ಖ್ಯಾತ ವಾದ್ಯಗಾರರಾಗಿದ್ದವರು. ಮೂಗೂರು ಅಮೃತಪ್ಪ ಹಾಗೂ ಆಸ್ಥಾನ ವಿದೂಷಿ ಮೂಗೂರು ಜೇಜಮ್ಮ ಖ್ಯಾತ ನೃತ್ಯಗಾರರಾಗಿದ್ದವರು, ತಿರುಮಕೂಡಲು ಸುಂದರಮ್ಮ ಪ್ರಸಿದ್ಧ ಭರತನಾಟ್ಯ ಕಲಾವಿದೆಯಾಗಿದ್ದು, ಆಸ್ಥಾನ ನರ್ತಕಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು. ಇವರು ಜಯದೇವನ ಅಷ್ಟಪದಿಯನ್ನು ಹಾಡುತ್ತಾ ಭಾವಪೂರ್ಣವಾಗಿ ಅಭಿನಯಿಸುತ್ತಿದ್ದರು.

ಟಿ.ಚೌಡಯ್ಯ (೧೮೯೫–೧೯೬೭) ನವರು ತಿರುಮಕೂಡಲಿನ ಅಗಸ್ತೆಗೌಡ ಹಾಗೂ ನಾಟ್ಯಪ್ರವೀಣೆ ಸುಂದರಮ್ಮನವರ ಪುತ್ರರಾಗಿದ್ದು, ಬಿಡಾರಂ ಕೃಷ್ಣಪ್ಪನವರ ಶಿಷ್ಯರಾಗಿ ೧೮ ವರ್ಷ ಸಂಗೀತಾಭ್ಯಾಸ ಮಾಡಿ ಪಿಟೀಲು ವಾದನದಲ್ಲಿ ಪಾಂಡಿತ್ಯಗಳಿಸಿ ೧೯೨೬ರಿಂದ ಸ್ವತಃ ಕಚೇರಿ ನೀಡಲಾರಂಭಿಸಿದರು. ಚೌಡಯ್ಯನವರು ದಿನದಲ್ಲಿ ೧೬ ಗಂಟೆಯನ್ನು ಪಿಟೀಲು ಅಭ್ಯಾಸಕ್ಕೆ ಮೀಸಲಾಗಿಟ್ಟಿದ್ದರಂತೆ, ಅರಿಯಕುಡಿ ರಾಮಾನುಜಾಯ್ಯಂಗಾರ್, ಪಾಲಘಾಟ್ ರಾಮಭಾಗವತರ್, ಸಂಗೀತ ವಿದೂಷಿ ಸುಬ್ಬಲಕ್ಷ್ಮಿ ಮುಂತಾದವರಿಗೆ ಇವರು ಪಕ್ಕವಾದ್ಯ ನುಡಿಸುತ್ತಿದ್ದವರು. ನಾಲ್ಕು ತಂತಿಯ ಪಿಟೀಲನ್ನು ಏಳುತಂತಿಗೆ ಪರಿವರ್ತಿಸಿ ಪ್ರಸಿದ್ಧಿಗೆ ತಂದ ಕೀರ್ತಿ ಇವರದಾಗಿತ್ತು. ಇವರು ಪೀಟೀಲಿಗೆ ೧೬ ತಂತಿಗಳನ್ನು ಅಳವಡಿಸಿ ಅಮೋಘವಾಗಿ ನುಡಿಸುತ್ತಿದ್ದರಂತೆ. ಇವರಿಗೆ ಆಳರಸರು ೧೯೪೧ರಲ್ಲಿ ಸಂಗೀತರತ್ನ ಎಂಬ ಬಿರದನ್ನು ನೀಡಿದ್ದು, ೧೯೭೨ರಲ್ಲಿ ರಾಷ್ಟ್ರಪತಿಗಳ ಪ್ರಶಸ್ತಿಯೂ ಲಭಿಸಿತ್ತು. ಮಧುರೈ ಸಂಗೀತ ಅಕಾಡೆಮಿ ನೀಡಿದ್ದ 'ಸಂಗೀತ ಕಲಾನಿಧಿ' ಹಾಗೂ ಮೈಸೂರು ಸಂಗೀತ ಪರಿಷತ್‌ನ 'ಗಾನಕಲಾಸಿಂಧು' ಇವರ ಪ್ರಮುಖ ಬಿರುದುಗಳಾಗಿತ್ತು. 'ತ್ರಿಮುಕುಟ' ಎಂಬ ಅಂಕಿತದೊಂದಿಗೆ ಇವರು ಹಲವಾರು ಸಂಗೀತ ಕೃತಿ, ತಿಲ್ಲಾನಗಳನ್ನು ರಚಿಸಿದ್ದಾರೆ. ಅಯ್ಯಂಗಾರ್ ಕಲಾಶಾಲೆಯನ್ನು ಮೈಸೂರು ಹಾಗೂ ಬೆಂಗಳೂರು ನಗರದಲ್ಲಿ ಸ್ಥಾಪಿಸಿದ್ದ ಇವರಿಗೆ ವಿದ್ವಾನ್ ವಿ. ಸೇತುರಾಮಯ್ಯ, ವಿ.ರಾಮರತ್ನಂ, ಆರ್.ಕೆ. ವೆಂಕಟರಾಮಶಾಸ್ತ್ರಿ, ಸಿ. ಆರ್ಮುಗಂ ಮುಂತಾದ ಖ್ಯಾತ ಶಿಷ್ಯವರ್ಗವಿತ್ತು.



ಸೋಸಲೆಯ ಎಸ್. ರಾಮಯ್ಯ, ಕೆಸ್ತೂರು ಮಹಾದೇವ, ಕುಕ್ಕೂರು ಲಿಂಗರಾಜು, ನೀಲಸೋಗೆ ಶೇಷಯ್ಯ, ಮುಂತಾದವರು ಹಾರ್ಮೋನಿಯಂ ಮಾಸ್ತರಾಗಿ ನಾಟಕ ಕಲಿಸುವ ಕಾಯಕದಲ್ಲಿ ತೊಡಗಿದ್ದವರು. ನರಸೀಪುರದ ವೆಂಕಟಸುಬ್ಬಯ್ಯ ಪ್ರಸಿದ್ಧ ವೀಣಾವಾದಕರಾಗಿದ್ದವರು. ಆಸ್ಥಾನ ವಿದೂಷಿ ಚಂದ್ರಕಾಂತಮ್ಮನವರು ನರಸೀಪುರದವರಾಗಿದ್ದು, ಸಂಗಿತ ನಾಟಕ ಅಕಾಡೆಮಿಯಿಂದ ಗೌರವಿಸಲ್ಪಟ್ಟವರು. ನರಸೀಪುರದ ಕೊಳಲು ವಾದಕ ದ್ವಾರಕಿ ಕೃಷ್ಣಸ್ವಾಮಿ ಹಾಗೂ ಕಿರಗಸೂರಿನ ಆರ್. ಸೋಮಣ್ಣ (ಪಿಟೀಲು) ಹೆಸರು ಮಾಡಿದವರು, ಆದಿಕರ್ನಾಟಕ ಜನಾಂಗದ ಮಹಿಳೆ ಬನ್ನೂರಿನ ಕೆಂಪಮ್ಮ, ಜಾನಪದ ಕೋಗಿಲೆ ಎಂದೇ ಪರಿಚಿತರಿದ್ದು, ತಿಮ್ಮಾಜಮ್ಮನೂ ಸೋಬಾನೆ ಪದಕ್ಕೆ ಹೆಸರಾಗಿದ್ದವರು. ನೃತ್ಯಪಟು ಸುಂದರಮ್ ಮತ್ತವರ ಮಗ, ಚಿತ್ರನಟ ಪ್ರಭುದೇವ್ ಪೂರ್ವಿಕರು ಮೂಲತಃ ಮೂಗೂರಿನವರು.

**ಚಿತ್ರಕಲೆ:** ತಿರುಮಕೂಡಲಿನ ಅಗಸ್ತೇಶ್ವರ ದೇವಾಲಯದ ಭಾವಣಿಯಲ್ಲೂ ಹಳೆಯ ವರ್ಣಚಿತ್ರಗಳಿವೆ. ಪ್ರವಾಸಿಕೇಂದ್ರ ಮುಡುಕುತೊರೆಯ ಮಲ್ಲಿಕಾರ್ಜುನ ಗುಡಿ ಆವರಣದಲ್ಲಿರುವ ಚಿತ್ರಮಂಟಪದ ಭಿತ್ತಿಯಲ್ಲಿ ಶಿವಪುರಾಣ ಸಂಬಂಧಿತ ವರ್ಣಚಿತ್ರಗಳಿವೆ. ನರಸೀಪುರದ ಕನಕಮೂರ್ತಿ ಕಲಾವಿನ್ಯಾಸಕಾರರಾಗಿದ್ದು, ಅನೇಕ ಲೇಖನಗಳನ್ನೂ ಬರೆದಿದ್ದಾರೆ.

**ಸ್ವಯಂ ಸೇವಾ ಸಂಸ್ಥೆಗಳು :** ಲಯನ್ಸ್‌ಕ್ಲಬ್, ರೋಟರಿಕ್ಲಬ್, ಯುವಕ ಮಂಡಳಿ, ಯುವತಿ ಮಂಡಲಗಳು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ೧೯೮೭ರ ವೇಳೆಗೆ ತಾಲೂಕಿನಲ್ಲಿ ೧೧೭ ಯುವ ಮಂಡಳಿ, ನಾಲ್ಕು ಯುವತಿ ಮಂಡಳಿ ಹಾಗೂ ೧೧ ಹವ್ಯಾಸಿ ಸಂಘಗಳಿದ್ದವು. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ನಡೆಸುತ್ತಿರುವ ನೆಹರು ಯುವಕೇಂದ್ರಗಳ ಸಹಯೋಗದೊಂದಿಗೆ ರಾಜ್ಯ ಯುವಜನಸೇವಾ ಇಲಾಖೆಯು ತಾಲೂಕು ಮಟ್ಟದಲ್ಲಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿವೆ. ರಸ್ತೆ, ಸೇತುವೆ ರಿಪೇರಿ, ಜೇನು ಸಾಕಣೆ, ಮತ್ಸ್ಯೋದ್ಯಮ ಮುಂತಾದ ಚಟುವಟಿಕೆಗಳೂ ಸೇರಿದಂತೆ ವಿವಿಧ ಕಾರ್ಯಯೋಜನೆಯನ್ನು ಯುವಮಂಡಲಗಳು ಹಮ್ಮಿಕೊಂಡಿವೆ. ಹೆಣಿಗೆ–ಹೊಲಿಗೆ ತರಬೇತಿ ವಯಸ್ಕರ ಶಿಕ್ಷಣ ಮುಂತಾದ ಚಟುವಟಿಕೆಗಳಲ್ಲಿ ಯುವತಿ ಮಂಡಳಿಗಳು ತೊಡಗಿಸಿಕೊಂಡಿದ್ದವು. ಹವ್ಯಾಸಿ ಸಂಘಗಳು ಕ್ರೀಡೆ, ಚಾರಣ, ಸೈಕಲ್ ಪ್ರವಾಸ, ಅಂಚೆಚೀಟಿ ಸಂಗ್ರಹ, ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದು, ಪ್ರತಿವರ್ಷ

ವಲಯ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ನಡೆಯುವ ಯುವ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ಎಂಟು ಯುವತಿ ಮಂಡಳಿ, ೧೪೩ ಯುವಕ ಮಂಡಲ, ೧೨ ಸಾಂಸ್ಕೃತಿಕ ಸಂಘಗಳು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

**ಕರುಣ ಟ್ರಸ್ಟ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ :** ತಾಲೂಕಿನಲ್ಲಿ ಕರುಣ ಸ್ವಯಂ ಸೇವಾ ಸಂಸ್ಥೆಯು ಕುಷ್ಠ ರೋಗ ನಿರ್ಮೂಲನಾ ಕಾರ್ಯದಲ್ಲಿ ತೊಡಗಿದ್ದು, ೧೯೯೨ರ ವೇಳೆಗೆ ೩೧೯ ರೋಗಿಗಳನ್ನು ಗುಣಪಡಿಸಿದೆ. ಇಂದಿಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ.

**ಚಿಂತನಾಲಯ :** ತಾಲೂಕು ಕೇಂದ್ರ ನರಸೀಪುರದಲ್ಲಿ ೧೯೮೩ರಲ್ಲಿ ಆರಂಭಗೊಂಡ ಈ ಸ್ವಯಂ ಸೇವಾಸಂಘವು ಜನರಲ್ಲಿ ವೈಚಾರಿಕ ಚಿಂತನೆ ಬೆಳೆಸುವುದರ ಜೊತೆಗೆ ಮಹಿಳೆಯರನ್ನು ವಿದ್ಯಾವಂತರನ್ನಾಗಿಸಲೂ ಯತ್ನಿಸುತ್ತಿದೆ.



## ಅಧ್ಯಾಯ ೧೧
# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

ತಿ.ನರಸೀಪುರ ತಾಲೂಕು ಸೇರಿದಂತೆ ಇಡೀ ದೇಶ ಬಹು ಹಿಂದಿನಿಂದಲೂ ಆಯುರ್ವೇದ ವೈದ್ಯಕೀಯ ಪದ್ಧತಿಗೆ ಹೆಸರಾಗಿದ್ದು, ನಾಟಿವೈದ್ಯ ಪಂಡಿತರೆಂದೇ ಹೆಸರಾಗಿದ್ದ ಈ ವರ್ಗದ ವೈದ್ಯರು ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧವನ್ನು ನೀಡಿ ರೋಗ ಗುಣಪಡಿಸುತ್ತಿದ್ದರು. ಅಲ್ಲದೇ ಗ್ರಾಮೀಣ ಪ್ರದೇಶದಲ್ಲಿ ಮಠಾಧಿಪತಿಗಳು, ಅಳಲೆಕಾಯಿ ಪಂಡಿತರೂ ನಾಟಿ ಚಿಕಿತ್ಸೆ ನೀಡುತ್ತಿದ್ದು, ಕೆಲವೊಮ್ಮೆ ವಿಭೂತಿಯನ್ನು ಮಂತ್ರಿಸಿ ಕೊಡುತ್ತಿದ್ದರು. ಬಾಯಿಬೀಗ, ಸಲಾಕೆ ಹರಕೆ ಹೊತ್ತುಕೊಳ್ಳುವುದು, ತಾಯತ ಮಂತ್ರಿಸಿಕೊಡುವುದು, ತಡೆ ಹೊಡೆಯುವುದೇ ಮುಂತಾದ ವಿಧಾನಗಳ ಮೂಲಕ ರೋಗ ಪರಿಹಾರವಾಗಬಹುದೆಂಬ ನಂಬಿಕೆ ಜನರಲ್ಲಿತ್ತು. ತಲಕಾಡಿನ ವೈದ್ಯನಾಥೇಶ್ವರವು ಚೋಳರ ಕಾಲದಿಂದಲೂ ನಾಟಿ ಔಷಧಿಗೆ ಹೆಸರಾಗಿತ್ತು. ಮೂಗೂರಿನ ದೇಶೇಶ್ವರ ಗುಡಿಯ ದೀಪಮಾಲೆ ಕಂಬದ ಮೇಲಿರುವ ಸುಮಾರು ೧೬ನೆಯ ಶತಮಾನದ ಶಾಸನ ಉಡುಸಿ(ಚಿ) ವ್ಯಾಧಿಯಿಂದ ಬಳಲುತ್ತಿದ್ದ ಹಂಪೆಯಣ್ಣನು ಗುಣಮುಖನಾಗಲೆಂದು ದೇವರಲ್ಲಿ ಪ್ರಾರ್ಥಿಸಿ, ಆ ಕಂಬವನ್ನು ಅವನ ತಮ್ಮನಾದ ಶಿವಪ್ಪನು ಗುಡಿ ಮುಂದೆ ನಿಲ್ಲಿಸಿದ ಅಪರೂಪದ ಅಂಶವನ್ನು ದಾಖಲಿಸುತ್ತದೆ. ಮುಸ್ಲಿಮರ ಆಗಮನದಿಂದಾಗಿ ಪರಿಚಯಿಸಲ್ಪಟ್ಟ ಯುನಾನಿ ವೈದ್ಯಪದ್ಧತಿಯು ಪಟ್ಟಣ ಪ್ರದೇಶಗಳಿಗೆ ಸೀಮಿತವಾಗಿದ್ದು, ಗ್ರಾಮೀಣ ಪ್ರದೇಶದ ಮೇಲೆ ಹಕೀಮರ ಪ್ರಭಾವ ಅಷ್ಟಾಗಲಿಲ್ಲ. ಮುಂದೆ ಬ್ರಿಟೀಷರ ಆಗಮನದೊಂದಿಗೆ ಆಲೋಪತಿ (ಇಂಗ್ಲಿಷ್) ವೈದ್ಯಕೀಯ ಪದ್ಧತಿ ಜನಪ್ರಿಯವಾಯಿತು. ಇಂದು ಈ ಮೂರು ಪದ್ಧತಿಗಳು ಚಲಾವಣೆಯಲ್ಲಿದ್ದರೂ, ಆಲೋಪತಿ ಚಿಕಿತ್ಸೆಯೇ ಹೆಚ್ಚಾಗಿ ಬಳಕೆಯಲ್ಲಿದೆ.

ಜಿಲ್ಲಾ ಕೇಂದ್ರ ಮೈಸೂರಿನಲ್ಲಿ ೧೮೩೦ರ ವೇಳೆಗಾಗಲೇ ಸಂಸ್ಥಾನದ ಆಸ್ಪತ್ರೆಯು ಕಾರ್ಯ ನಿರ್ವಹಿಸುತ್ತಿದ್ದು, ೧೮೩೨ರಿಂದ ಆಲೋಪತಿ ಚಿಕಿತ್ಸಾಲಯವು ಮೈಸೂರು ನಗರದಲ್ಲಿ ಕಾರ್ಯಾರಂಭ ಮಾಡಿತು. ಕ್ರಮೇಣ ತಾಲೂಕು ಕೇಂದ್ರಗಳಲ್ಲಿ, ಚಿಕಿತ್ಸಾಲಯಗಳು ಆರಂಭಗೊಂಡವು. ಅದರಂತೆ ನರಸೀಪುರದಲ್ಲಿ ತಾಲೂಕು ಮಟ್ಟದ ಸರ್ಕಾರಿ ಚಿಕಿತ್ಸಾಲಯ ೧೮೯೨ರಲ್ಲಿ ಆರಂಭವಾಯಿತು. ಕ್ರಮೇಣ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು